doc-551
T.P-2

Reg No B G 155 26—9—72

In The State First Golden Jubilee Celebrated Paper 'Satyavadi' daily, Mysore 4

56 th Year of Publication

★

News, Views, Dharmic Moral Ethical Matters

ರಾಜ್ಯದಲ್ಲಿ ಪ್ರಥಮ ಸುವರ್ಣ ಮಹೋತ್ಸವ ಪೂರೈಸಿದ ಪತ್ರಿಕೆ

ಸ್ಥಾಪಕರು: ಅರಮನೆ ಸಿರಸ್ತೇದಾರ್ ಎಂ.ವಿ. ಸುಬ್ಬರಾವ್ ಸಂಪಾದಕರು: ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣರಾವ್ [2 ಪೈಸೆ

ಎನ ಜಿ ಓ ಗಳು ವೇತನ ಪಡೆಯುವುದಿಲ್ಲ

ಡಾ ನೋದಿ

ಪದ್ಮಭೂಷಣ ಡಾ. ಎಂ. ಸಿ. ನೋದಿ ಯವರು (ಭಾರತಾಧ್ಯಕ್ಷರ ಗೌ. ನೇತ್ರ ವೈದ್ಯರು) ಬೆಂಗಳೂರು ನಗರದಲ್ಲಿ ಮುಂದಿನ ತಿಂಗಳು 1 ರಂದು ಉಚಿತ ನೇತ್ರ ಚಿಕಿತ್ಸೆ ಮತ್ತು ಪರೀಕ್ಷೆ ನಡೆಸುವರು.

★

ಕೇಳಿಕೆಯ ಪ್ರಥಮ ಹಂತ

ನಾನ್ ಗೆಜೆಟೆಡ್ ನೌಕರರು ಸರ್ಕಾರದ ಮನವರಿಕೆಗೆ ತಮ್ಮ ಕೇಳಿಕೆಗಳನ್ನು ತರಲು ಪ್ರಥಮ ಮಾರ್ಗವಾಗಿ ಸೆಪ್ಟಂಬರ್ ತಿಂಗಳ ಸಂಬಳವನ್ನು ಪಡೆಯಲು ನಿಷ್ಕರ್ಷಿತವಾಗಿರುವ ತಾ. 29 ಮತ್ತು 30 ರಂದು ಪಡೆಯದೆ ಅಕ್ಟೋಬರು 3 ರಂದು ಸೂಚಿಸಲಾಗಿದೆ ಎಂದು ಬೆಂಗಳೂರು ವರದಿ ತಿಳಿಸುತ್ತದೆ

★

ಬಂದಿಗಳ ಅದಲು ಬದಲು

ನವ ದೆಹಲಿಯಿಂದ ಬಂದಿರುವ ವರದಿ ಪ್ರಕಾರ, ಪಾಕ್ ಗಡಿಯಲ್ಲಿ ಭಾರತ ಪಾಕಿಸ್ತಾನ ಯುದ್ಧ ಖೈದಿಗಳಿಗೆ ಬಂದಿರುವ ಬಹುಮಾನಗಳನ್ನು ಅದಲು ಬದಲು ಮಾಡಲಾಯಿತು.

●

ಹೊಡೆದಾಟದಲ್ಲಿ ಗಾಯ

ದೆಹಲಿ ವಿಶ್ವವಿದ್ಯಾನಿಲಯದ ಭಾಗದಲ್ಲಿ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ ಮತ್ತು ವಿದ್ಯಾರ್ಥಿಗಳ ರಾಷ್ಟ್ರೀಯ ಸಂಘದ ಎರಡು ಗುಂಪಿನಲ್ಲಿ ಹೊಡೆದಾಟವಾಗಿ ಹತ್ತು ಮಂದಿ ಗಾಯಗೊಂಡರು

★ ಪಾಕೀಸ್ತಾನದ ರಾವಲ್ಪಿಂಡಿ ಪೋಲೀಸರು ಒಂದು ಸ್ಥಳೀಯ ಹೋಟೆಲಿನಲ್ಲಿ ಇಬ್ಬರು ಭಾರತೀಯ ಗೂಢಚಾರರನ್ನು ಬಂಧಿಸಿರುವದಾಗಿ ಹೇಳಿರುವರು.

★ ಪಾಲ್ಘಾಟು ರೈತರು ಭಾರತ ರಕ್ಷಣಾ ವಿಧಿಯನ್ನು ಉಲ್ಲಂಘಿಸಲಿರುವರು.

ಅಂಚೆ ನೌಕರರ ಮುಷ್ಕರ

ಅಹಮದಾಬಾದಿನ ಸ್ಥಳೀಯ ಸಂಘದ ಇಬ್ಬರು ನಾಯಕರ ವರ್ಗದ ಅಜ್ಞೆ ವಾಪಸು ಪಡೆಯಬೇಕೆಂಬ ಮತ್ತು ಇತರ ಕೇಳಿಕೆಗಳಿಗಾಗಿ ಇಲ್ಲಿಯ ಅಂಚೆ ಮಾನೇರರು ಮತ್ತು 4 ನೇ ತರಗತಿ ಅಂಚೆ ನೌಕರರು ಅನಿರ್ದಿಷ್ಟಕಾಲ ಮುಷ್ಕರ ಹೂಡಿರುವರು.

★

ಸರಬರಾಜು ಏರಿಕೆ

ಮದ್ರಾಸು ಪ್ರದೇಶದ ನ್ಯಾಯಬೆಲೆ ಅಂಗಡಿಗಳಿಗೆ ಕೊಡುವ ಆಹಾರ ಧಾನ್ಯವನ್ನು 40 ಸಾವಿರ ಟನ್‌ಗಳಿಗೆ ಹೆಚ್ಚಿಸಲಾಗುವುದು

★

21 ಮಂದಿಯ ಮರಣ

ಕ್ಯಾಲಿಫೋರ್ನಿಯಾದ ಸಾಕ್ರಮೆಂಟೋ ವಿನಲ್ಲಿ ಒಂದು ವಿಮಾನವು ಹೊರಟಾಗ ಸಿಡಿದು ಅದು ಒಂದು ಐಸ್ ಕ್ರೀಂ ಅಂಗಡಿಗೆ ಬಿದ್ದು ಒಂದು ಜನ್ಮದಿನೋತ್ಸವ ತಂಡದ 17 ಮಂದಿ ಮಕ್ಕಳು ಸೇರಿ 21 ಮಂದಿ ಸತ್ತರು.

★

ಹರತಾಳ ಆಚರಣೆ

ಮಾರ್ಕ್ಸ್‌ವಾದಿ ನಾಯಕ ಅಜಕೋಡಿ ರಾಘವನ್‌ರ ಕೊಲೆಯನ್ನು ಪ್ರತಿಭಟಿಸಿ, ಕೇರಳದಲ್ಲಿ ಹರತಾಳ ಆಚರಿಸಲಾಯಿತು.

★

ಮೊಕದ್ದಮೆ ರಿಜಿಸ್ಟರ್

ತುಮಕೂರಿನ ಸಹಕಾರ ಸಂಘ ಒಂದರಲ್ಲಿ 16 ಸಾವಿರ ರೂ. ದುರುಪಯೋಗವಾಗಿರುವ ಕುರಿತು ಮಾಜಿ ಕಾರ್ಯದರ್ಶಿಯವರ ಮೇಲೆ ಪೋಲೀಸರು ಮೊಕದ್ದಮೆ ರಿಜಿಸ್ಟರ್ ಮಾಡಿಕೊಂಡಿರುವರು

★ ಶಂಕಿತ ವಿಜ್ಞಾರ್ಪಣೆ ಕುರಿತು ನಿರ್ದಿಷ್ಟ ಕಾಲ ಸೂಚನೆ ಇಲ್ಲವೆಂದು ಶ್ರೀ ಚನ್ನಬಸಪ್ಪನವರು ತಿಳಿಸಿರುವರು.

ಜ್ಯೋತಿಷ್ಯ – ನೆಹ್ರೂರ ಅಪನಂಬಿಕೆ

ಪಂ॥ ನೆಹ್ರೂರವರ ಜೀವಿತದ ಕಡೇ ವರ್ಷಗಳಲ್ಲಿ ನಡೆದ ಎರಡು ಘಟನೆಗಳನ್ನು ಇಲ್ಲಿ ತಿಳಿಸಲಾಗಿದೆ ಅವರಿಗೆ ಜ್ಯೋತಿಷ್ಯದ ಮೇಲೆ ಇದ್ದ ಅಪನಂಬಿಕೆಯು ಚೆನ್ನಾಗಿ ತಿಳಿದುದೇ ಆಗಿದೆ ತಿಳುವಳಿಕೆಯಿಲ್ಲದ ಜನರಿಗೆ ಮೋಸಮಾಡಲು ನಾಕ್ಷತ್ರದ ದೃಗ್ವಿಷಯದ ಕಾಲ್ಪನಿಕ ಸಂಬಂಧದಲ್ಲಿ ಸೃಷ್ಟಿಸಿರುವ ವೇಷಗಾರರ ಕಾರ್ಯವು ಅದೆಂದು ಅವರು ದುರಹಂಭಾವದಿಂದ ವಿವರಿಸಿದ್ದರು.

ಹೀಗಿರುವಲ್ಲಿ 1962 ನೇ ಫೆಬ್ರವರಿ–ಮಾರ್ಚ್‌ಯಲ್ಲಿ ಚುನಾವಣಾ ಪ್ರಚಾರ ಮುಗಿಸಿಕೊಂಡು ಬಂದ ನಂತರ ಅವರು ಒಂದು ತಿಂಗಳಿಗೂ ಹೆಚ್ಚಾಗಿ ಜ್ವರಪೀಡಿತರಾದರು. ಆಗ ತಮ್ಮ ಇಚ್ಛೆಗೆ ವಿರುದ್ಧವಾಗಿ ಬಲಾತ್ಕಾರದಿಂದ ತಮ್ಮ ಜಾತಕವನ್ನು ಡೆಲ್ಲಿಯ ಒಬ್ಬ ಪ್ರಖ್ಯಾತ ಜ್ಯೋತಿಷಿಗೆ ತೋರಿಸಬೇಕಾಯಿತು. ಜ್ಯೋತಿಷಿಯು ಅದನ್ನು ನೋಡಿ ಎಲ್ಲ ವಿಷಯವನ್ನೂ ವಿವರಿಸುತ್ತಾ, ಕಡೆಗೆ, ಇನ್ನು 6 ತಿಂಗಳಲ್ಲಿ ನಿಮ್ಮ ಅತ್ಯುತ್ತಮ ಮಿತ್ರನು ನಿಮಗೆ ದ್ರೋಹವೆಸಗುವನು ; ಇದರಿಂದ ಭಾರತವು ಚೀನಾದೊಡನೆ ಯುದ್ಧದಲ್ಲಿ ಸಿಕ್ಕಿಬೀಳುವುದು : ಕಡೆಗೆ ನಮ್ಮ ದೇಶವು ಅಪಮಾನಕರವಾದ ಸೋಲನ್ನನುಭವಿಸುವುದು, ಎಂದು ತಿಳಿಸಿದನು. ಇದನ್ನು ಕೇಳಿದ ನೆಹ್ರೂರವರು ಕ್ರೋಧಾವೇಶರಾಗಿ– ಎಂಥಾ ಅವಿವೇಕದ ಮಾತನಾಡುತ್ತೀ, ಇದು ಎಂದಿಗೂ ಸಂಭವಿಸುವುದಿಲ್ಲ, ಮುಚ್ಚು ಬಾಯಿ, ಎಂದು ಅರಚಿಕೊಂಡರು. ಜ್ಯೋತಿಷಿಯು ಇಡಕ್ಕೆ ಹೆದರಿ, ನೆಹ್ರೂರವರ ಜಾತಕವನ್ನು ಸುತ್ತಿಟ್ಟು, ಅಪಮಾನಿತನಾಗಿ ನೋಂದುಕೊಂಡು ತನ್ನ ಸ್ಥಳಕ್ಕೆ ವಾಪಸ್ಸಾದನು. ಆದರೆ ಈ ಜ್ಯೋತಿಷಿಯು ಭವಿಷ್ಯನುಡಿಗಳೆಲ್ಲಾ ಸತ್ಯವಾಯಿತು.

ಜ್ಯೋತಿಷಿಯು ಭವಿಷ್ಯ ಹೇಳಿಕೆಗಳು ಕರಾರುವಾಕ್ಕಾಗಿ ಸಂಭವಿಸುತ್ತಿರುವುದನ್ನು ಕಂಡು, ನೆಹ್ರೂರವರು ತಡೆಯಲಾರದೆ, ತಮ್ಮ ಇಚ್ಛಾಪೂರ್ವಕವಾಗಿ ಜ್ಯೋತಿಷಿಯನ್ನು ಬರಮಾಡಿಕೊಂಡರು. ಜ್ಯೋತಿಷಿಯು– ಪ್ರಧಾನಿಯವರ ಜೀವಕ್ಕೆ ತೀಕ್ಷ್ಣ ಅಪಾಯಕಾರಿಯಾಗಿದೆಯೆಂದೂ, ವಿಶೇಷ ಅನುಷ್ಠಾನವನ್ನು ಬ್ರಾಹ್ಮಣ ಪುರೋಹಿತರ ಮೂಲಕ ಮಾಡುವುದಿಂದ ನಿವಾರಿಸಿದರೆ ಮಾತ್ರ ಜೀವ ಉಳಿಯುವುದೆಂದೂ ತಿಳಿಸಿದನು. ಇದನ್ನು ಕೇಳಿದ ನೆಹ್ರೂರವರ ನೆಂಟರಿಷ್ಟರೂ ಮಿತ್ತರರೂ ಪುರೋಹಿತ ವರ್ಗದ ಒಳ್ಳೆ ವಿದ್ವಾಂಸರೂ ಶಾಸ್ತ್ರವೇತ್ತರೂ ಆದ 50 ಮಂದಿಯನ್ನು ಈ ಕಾರ್ಯಕ್ಕೆ ನೇಮಿಸಿದರು. ಅವರು ಶಾಸ್ತ್ರೋಕ್ತವಾಗಿ ನಿಯಮಿತ ಅನುಷ್ಠಾನವನ್ನು ಮುಗಿಸಲು ಒಂದು ಕ್ಷಣದ ಶ್ರದ್ಧಾವಧಿಯನ್ನು ತೆಗೆದುಕೊಂಡರು. ಅವರು ಪ್ರತಿದಿನ ಶಾಸ್ತ್ರವಿಹಿತ ಕಾರ್ಯಾನಂತರ ಪ್ರಧಾನಿಯವರ ನಿವಾಸಕ್ಕೆ ಆಗಮಿಸಿದಾಗ, ನೆಹ್ರೂರವರು ತುಂಬಾ ಭಕ್ತಿಪೂರ್ವಕವಾಗಿ ಪ್ರತಿಯೊಬ್ಬರಿಂದಲೂ ಚರಣಾಮೃತವನ್ನು ಸ್ವೀಕರಿಸಿ, ಹಣೆಗೆ ಶುಭತಿಲಕವನ್ನು ಇಡಿಸಿಕೊಳ್ಳುತ್ತಿದ್ದರು. ನೆಹ್ರೂರವರು ವಿಪತ್ಕಾರಕ ಖಾಯಿಲೆಯಿಂದ ಪಾರಾಗಿ ಉಳಿದುಕೊಂಡರು.

ಆಮೇಲೆ ಆದೇ ಜ್ಯೋತಿಷಿಯರನ್ನು ಪ್ರಧಾನಿಯವರ ಆಯುರಾರೋಗ್ಯ ಬಗ್ಗೆ ವಿಚಾರಿಸಿದಾಗ, ಪ್ರಧಾನಿಯವರು 1964 ಜನವರಿಯಲ್ಲಿ ಅಪಾಯಕಾರಿ ಖಾಯಿಲೆಗೆ ತುತ್ತಾಗುವರೆಂದೂ, ಮೇ 27 ರ ನಂತರ ಉಳಿಯುವ-ಸಂಭವವಿಲ್ಲವೆಂದೂ ತಿಳಿಸಿ

ದನು. 1964 ಜನವರಿಯಲ್ಲಿ ನೆಹ್ರೂರವರು ಭುವನೇಶ್ವರದಲ್ಲಿ ಕಾಂಗ್ರೆಸ್ ಅಧಿವೇಶನ ಕಾಲದಲ್ಲಿ ಲಕ್ವ ಹೊಡೆತಕ್ಕೆ ತುತ್ತಾದ ವಿಷಯವು ಇಡೀ ಭೂಲೋಕಕ್ಕೇ ಗೊತ್ತಿದೆ. ನಂತರ ಸ್ವಲ್ಪ ಗುಣಗೊಂಡಾಗ, ಅವರು ತಮ್ಮ ನಿತ್ಯ ಕೆಲಸಗಳನ್ನು ಸ್ವಲ್ಪ ನೋಡಿಕೊಳ್ಳುತ್ತಿದ್ದಾಗ, ಮೇ ಮಧ್ಯದಲ್ಲಿ, ಬೊಂಬಾಯಿನ ಮತ್ತೊಬ್ಬ ಜ್ಯೋತಿಷಿಯು, ಕೆಲವು ಮಂದಿ ಮಂತ್ರಿಮಂಡಲ ಸಚಿವರೊಡನೆ ಮಾತನಾಡುತ್ತಿದ್ದಾಗ, ನೆಹ್ರೂರವರ ತಕ್ಷಣ ಸಾವಿನ ಭವಿಷ್ಯ ತಿಳಿಸಿದನು ; ಆ ಮಾತು ನಡೆದ 10–12 ದಿನಗಳಲ್ಲಿ, ಮೇ 27 ರಂದು ನೆಹ್ರೂರವರು ನಿಧನರಾದರು.

★

ಈಗ ಹೊರಬಟ್ಟಿರುವ ವಿಷಯ ಪ್ರಕಾರ, ಸಾಕಷ್ಟಾನದ ಮಾತುಕತೆ ಹುಟ್ಟುವುದಕ್ಕೆ ಎಷ್ಟೋ ಮುಂಚೆ, ಕ್ವಯಿದ್–ಇ–ಅಜಾಂ ಜಿನ್ನಾರವರು (ಜಿನ್ನಾರವರು ಇಂಗ್ಲೆಂಡಿನಲ್ಲಿ ಪ್ರಿವಿ ಕೌನ್ಸಿಲ್ ಮುಂದೆ ಬ್ಯಾರಿಸ್ಟರ್ ವೃತ್ತಿ ನಡೆಸುತ್ತಿದ್ದಾಗ) ಸಾಯುವುದಕ್ಕೆ ಮುಂಚೆ ಒಂದು ಸ್ವತಂತ್ರದೇಶದ ಮುಖ್ಯಸ್ಥರಾಗುವರೆಂದು ಒಬ್ಬ ಹಿಂದೂ ಜ್ಯೋತಿಷಿಯು ತಿಳಿಸಿದಾಗ, ಜಿನ್ನಾರವರು ಈ ಭವಿಷ್ಯವಾಣಿಯು ಒಬ್ಬ ಜ್ಯೋತಿಷಿಯ ಕಾಲ್ಪನಿಕ ಮೆದಳಿನ ಕಲ್ಪಿತ ಹೇಳಿಕೆ ಎಂದು ಭಾವಿಸಿದ್ದರಂತೆ. ಕಾಲಾನಂತರ ಈ ಭವಿಷ್ಯನುಡಿಯು ಒಂದು ಐತಿಹಾಸಿಕ ನಿಜಸ್ಥಿತಿಯಾಗಿ ಪರಿಣಮಿಸಿದಾಗ, ಜ್ಯೋತಿಷಿಗೆ ಉದಾರವಾಗಿ ಬಹುಮಾನ ದೊರೆಯಿತೆಂದು ವರದಿಯಾಗಿದೆ.

[ಹಿಂದುತ್ವ – ಟ್ರೂತ್ – ಅನುವಾದ]

ಲೈಂಗಿಕ ಶಿಕ್ಷಣ

ಬೆಂಗಳೂರು— ವಿಶ್ವವಿದ್ಯಾನಿಲಯ ಮಟ್ಟದಲ್ಲಿ ಲೈಂಗಿಕ ಶಿಕ್ಷಣ ಜಾರಿಗೆ ತರಬಹುದೆಂಬ ಅಭಿಪ್ರಾಯವನ್ನು ಆರೋಗ್ಯ ಮಂತ್ರಿ ಸಿದ್ಧವೀರಪ್ಪನವರು ಆರೋಗ್ಯ ಕೇಂದ್ರವನ್ನು ಉದ್ಘಾಟಿಸುತ್ತಾ ವ್ಯಕ್ತಪಡಿಸಿದರು.

ವುಡ್‌ಲಾಂಡ್ 22-9-72ರಿಂದ ಅಮೋಘ 3ನೇ ವಾರ

ಹಿಂದಿ ಈಸ್ಟ್‌ಮನ್ ಕಲರ್

ಫಿಲಂಯುಗ ಅರ್ಪಿಸುವ

ಆಂಖೊ ಆಂಖೊ ಮೆ

ಪಾತ್ರ : ರಾಖಿ, ರಾಖೇಶ್ ರೋರ್ಷ ಮತ್ತು ಪ್ರಾಣ್

ಬೆಳಗಿನ ಪ್ರದರ್ಶನ 10–30 ಕ್ಕೆ ಜೋಟೇಸಿ ಮುಲಾಖಾತ್

ಅಪೆರಾ 22 9 72 ರಿಂದ

ಶ್ರೀ ನವನೀತ್ ಫಿಲಂಸ್‌ರವರ ಅಪೂರ್ವ ತಮಿಳು ಚಿತ್ರ

ಪುಗುಂದ ವೀಡು

ನಿರ್ದೇಶನ : ಪಟ್ಟು

ಪ್ರತಿ ದಿನ 3 ಪ್ರದರ್ಶನಗಳು

ಅಖಿಲ ಭಾರತದಲ್ಲಿ ಕೂಡಲೇ



ಗೋವಧೆ ನಿಶ್ಶೇಧವಾಗಲಿ

Quality Printing Neat Binding

Lakshminarasimha Press

Sivarampet, Mysore

Edited Printedand Published by Dharmapracharaniratа
M S Krishna Rao (Propretor) at the Satyavadi Press
Chamarajapuram Mysore

SHAKTI
SUDHA

A Superb Tonic

' ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠ ವೆನ್ನುವುದು ಸೊಕ್ಕಿನ' ಕಲ್ಪನೆ
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಪ ಧರ್ಮಕರ್ತ
— ಮಹಾತ್ಮಾ ಗಾಂಧಿ

ಆದೇಶ ಹೊತ್ತ ಚಿತ್ರ ಸಂದೇಶ್ ರವರ ಜೊಚ್ಚಲು ಚಿತ್ರ

★

ಆನೆ-ಹುಡುಗ

Potect the Cow

For Rugs, Sweaters, and Kashmir Coats Visit Bank Road Bahusar